ಘಟನೆಯಲ್ಲ; ಆದರೆ ರಿಕ್ಷಾ ತುಳಿಯುವವರಲ್ಲಿ ತಮ್ಮ ಸ್ಥಿತಿಯಿಂದ ಮೇಲೇರುವ ಭಾವನೆ ಹುಟ್ಟಲೆಂದು ಈ ಕತೆ ಹೇಳುತ್ತಿದ್ದೇನೆ. ನನ್ನ ಗೆಳೆಯ ಚಂದನ್ ಲಾಯರ್ ಹುದ್ದೆಗೆ ಏರಬಹುದಾದರೆ, ಲಕ್ಷಾಂತರ ಸೈಕಲ್ ರಿಕ್ಷಾದವರು ಯಾಕೆ ಇದನ್ನು ಸಾಧಿಸಲಾರರು? ರಿಕ್ಷಾ ಯೂನಿಯನ್ನುಗಳು ಹಾಗೂ ಸರ್ಕಾರ ಈ ಜನರ ಪ್ರಗತಿಗೆ ಸಹಾಯ ಹಸ್ತ ಚಾಚಲಿ ಎಂದು ಕೇಳಿಕೊಳ್ಳುತ್ತೇನೆ.

'ಜಾಡಮಾಲಿ, ಚಮ್ಮಾರ, ಕೆಳಜಾತಿ, ನಾನು, ನೀನು... ಈ ಯಾವ ತರತಮವೂ ನನ್ನಲ್ಲಿಲ್ಲ. ಈ ಕೆಳದರ್ಜೆಯ ಸ್ಥಾನಗಳು ಬಂದಿರುವುದು ಹಳೆಯ ಶಾಸ್ತ್ರಗ್ರಂಥಗಳಿಂದ; ಅವನ್ನು ಎತ್ತಿ ಹೊರಗೆಸೆಯುವುದು ಅತ್ಯಗತ್ಯ. ರಿಕ್ಷಾ ತುಳಿಯುವವನ ವೃತ್ತಿ ಪ್ರಾಣಿಯ ವೃತ್ತಿ; ಅದು ನಮ್ಮನ್ನು ಬರ್ಬರ ಸಮಾಜದತ್ತ ಒಯ್ಯುತ್ತದೆ. ಸರ್ಕಾರದ ಬಳಿ ಇದಕ್ಕೆ ಉತ್ತರವೇ ಇಲ್ಲ.'

ದಲಿತರು ಹಳ್ಳಿ ಬಿಟ್ಟು ನಗರಕ್ಕೆ ಬರುತ್ತಿರುವ ಈ ಘಟ್ಟದಲ್ಲಿ, 'ಸಂವಿಧಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೀಸಲಾತಿಯ ಅವಕಾಶವಿದ್ದಾಗಲೂ ಅದು ಸರಿಯಾಗಿ ಜಾರಿಗೆ ಬರುತ್ತಿಲ್ಲ; ಇದಕ್ಕೆ ಸರ್ಕಾರ ಹಾಗೂ ಅಧಿಕಾರಿಗಳ ದಲಿತವಿರೋಧಿ ಮನಸ್ಥಿತಿ ಹಾಗೂ ಎಚ್ಚರಗೇಡಿತನವೇ ಕಾರಣ' ಎಂದು ಲೋಹಿಯಾ ಟೀಕಿಸಿದರು. ಜೊತೆಗೆ, ಮತ್ತೊಂದು ಮಾತನ್ನೂ ಹೇಳಿದರು: 'ನೋವಿನ ಸಂಗತಿಯೆಂದರೆ, ಈಗ ಅಸ್ಪೃಶ್ಯರ ನಾಯಕರು, ಬುಡಕಟ್ಟುಗಳ ನಾಯಕರು ಗಟ್ಟಿಯಾಗಿ ದನಿಯೆತ್ತಿ ಭೂಮ್ಯಾಕಾಶಗಳನ್ನು ನಡುಗಿಸಬೇಕಾಗಿತ್ತು; ಅದರೆ ಅದರ ತದ್ವಿರುದ್ಧ ಬೆಳವಣಿಗೆ ನಡೆಯುತ್ತಿದೆ.'

ಚರ್ಚೆಯ ಕೊನೆಗೆ ಲೋಹಿಯಾ ಹೇಳುತ್ತಾರೆ: 'ಪೌರಕಾರ್ಮಿಕ ಸಿಬ್ಬಂದಿಯ ಸಂಬಳ ಕೋನೇ ಪಕ್ಷ ಇನ್ನೂರೈವತ್ತು ರೂಪಾಯಿ ಇದ್ದರೆ, ರಾಷ್ಟ್ರಪತಿಗಳ ಎಲ್ಲ ಭತ್ಯೆಗಳೂ ಸೇರಿ ಸಾವಿರ ರೂಪಾಯಿ ಮೀರಬಾರದು. ಟಾಟಾ ಇರಲಿ, ಬಿರ್ಲಾ ಇರಲಿ, ಆತ ಕೂಡ ಹೆಚ್ಚೆಂದರೆ ಸಾವಿರ ರೂಪಾಯಿ ವೆಚ್ಚ ಮಾಡುವಂತಿರಬೇಕು.'

ಲೋಹಿಯಾ ಒಮ್ಮೆ 'ನಾನೊಬ್ಬ ಸಫರ್‌ಮೈನಾ' ಎಂದು ಬಣ್ಣಿಸಿಕೊಂಡರು. ಇಂಗ್ಲಿಷಿನ 'ಸ್ಯಾಪರ್ಸ್ ಅಂಡ್ ಮೈನರ್ಸ್' ಎಂಬ ಎರಡು ಪದಗಳನ್ನು ಜೋಡಿಸಿ ಲೋಹಿಯಾ ಮಾಡಿಕೊಂಡ ಹಿಂದಿ ಪದ ಇದು! ಅಂದರೆ 'ಅಗೆದು ನಿರ್ಮಿಸುವವರು' ಎಂದರ್ಥ. ಲೋಕಸಭೆಯ ಚರ್ಚೆಯೊಂದರಲ್ಲಿ ಲೋಹಿಯಾ ಹೇಳಿದರು: 'ನಾವು ಸಫರ್‌ಮೈನಾಗಳು; ನಾವು ಬೆಟ್ಟಗುಡ್ಡ ಅಗೆದು ರಸ್ತೆ ಮಾಡುತ್ತೇವೆ. ನೀವು ನಮ್ಮನ್ನು ಆ ರಸ್ತೆಯ ಮೇಲೆ ಓಡಾಡಲು ಕೂಡ ಬಿಡುವುದಿಲ್ಲವಲ್ಲ?'

* * *

ತಮ್ಮ ಐವತ್ತನಾಲ್ಕನೆಯ ವಯಸ್ಸಿನಲ್ಲಾದರೂ ಲೋಹಿಯಾ ಓಡಾಡಲು, ಪಾರ್ಲಿಮೆಂಟಿಗೆ ಹೋಗಿ ಬರಲು ಕಾರ್ ತೆಗೆದುಕೊಳ್ಳಬೇಕೆಂದು ಗೆಳೆಯರು ಸಲಹೆ ಮಾಡತೊಡಗಿದರು. ಆಗ ಲೋಹಿಯಾ, ಲೋಕಸಭಾ ಅಧಿವೇಶನಕ್ಕೆ ಹೋಗಿ ಬರಲು ಕೊಡುವ ಪ್ರಯಾಣ ಭತ್ಯೆ ಎಷ್ಟು; ಅಧಿವೇಶನದ ದಿನ ಪಾರ್ಲಿಮೆಂಟಿಗೆ ಹೋಗಿ ಬರುವ ಟ್ಯಾಕ್ಸಿಯ ವೆಚ್ಚವೆಷ್ಟು; ಕಾರಿನ ಬೆಲೆಯೆಷ್ಟು... ಎಲ್ಲವನ್ನೂ ಲೆಕ್ಕ ಹಾಕಿದರು. ಕೊನೆಗೆ, ಕಾರ್ ಇರುವ ಗೆಳೆಯರು ಅಧಿವೇಶನ ನಡೆಯುವ ದಿನ ಕಾರು ಕಳುಹಿಸಿದರೆ ಸಾಕು ಎಂದು ಲೋಹಿಯಾ ತೀರ್ಮಾನಿಸಿದರು. ಅದು ಕೆಲವು ತಿಂಗಳು ಮಾತ್ರ ನಡೆಯಿತು. ಕಾರಿನ ಕತೆ ಅಲ್ಲಿಗೇ ಮುಗಿಯಿತು!

ದೆಹಲಿಯ ಬಿರುಬೇಸಿಗೆಯನ್ನು ಸಹಿಸಲು ಒಂದು ಕೂಲರ್ ತೆಗೆದುಕೊಳ್ಳಲು ಲೋಹಿಯಾಗೆ ರಮಾ ಸಲಹೆ ಕೊಟ್ಟರು. 'ಕೂಲರ್? ನನಗಾ? ಛೇ! ಛೇ!' ಎಂದರು ಲೋಹಿಯಾ.

ಲೋಕಸಭಾ ಸದಸ್ಯರಾದ ಮೇಲೆ ಲೋಹಿಯಾಗೆ ನಿಗದಿಯಾಗಿದ್ದ ಕ್ವಾರ್ಟರ್ಸ್ ಎಲ್ಲ ಸಮಾಜವಾದಿಗಳಿಗೆ, ರಾಜಕಾರಣಿಗಳಿಗೆ, ಸಾಮಾನ್ಯ ಜನರಿಗೆ ತೆರೆದ ಮನೆಯಾಗಿತ್ತು. 1966ರಿಂದ ಲೋಹಿಯಾರ ಪತ್ರವ್ಯವಹಾರಗಳನ್ನು ನೋಡಿಕೊಳ್ಳತೊಡಗಿದ್ದ ಕೋಣಿ ಸದಾಶಿವ ಕಾರಂತ ಈ ಮನೆಯ ಔಟ್‌ಹೌಸ್‌ನಲ್ಲಿದ್ದರು. ಹೀಗೊಂದು ದಿನ ಕಾರಂತರ ಜೊತೆ ಮಾತಾಡುತ್ತಾ ಲೋಹಿಯಾ ಹೇಳಿದರು:

'ರಾಷ್ಟ್ರದ ರಾಜಕಾರಣದ ಕೆಸರಿನಲ್ಲಿ ಯಾವುದೂ ಉಳಿಯುವುದಿಲ್ಲ; ಯೋಗ್ಯವಾದುದು, ಮೌಲಿಕವಾದುದು ಯಾವುದೂ ನಿಲ್ಲುವುದಿಲ್ಲ. ತಾನು, ತನ್ನದೆಂಬ ಮಿತಿಗೆ ಎಲ್ಲರೂ ಅಂಟಿಕೊಳ್ಳುವವರೇ. ವ್ಯಕ್ತಿ ತನ್ನ ಅಥವಾ ತನ್ನ ಪುಟ್ಟ ಬಳಗದ ಯೋಗಕ್ಷೇಮದ ಕಡೆ ಗಮನ ಹರಿಸುತ್ತಾನೆ. ತತ್ವಜ್ಞಾನ ಬೋಧಿಸುವವನ ಮನಸ್ಸಿನಲ್ಲಿ ಏನೋ ಕುಯುಕ್ತಿ ಹಣಿಕಿಕ್ಕುತ್ತಿರುತ್ತದೆ. ಇವೆಲ್ಲವೂ ಸಂಕುಚಿತ ಉದ್ದೇಶಗಳ ಪರಿಣಾಮಗಳು. ರಾಷ್ಟ್ರೀಯ ದೃಶ್ಯವೇ ಹಾಗಿರುವಾಗ, ಈ ಜೌಗು ಪ್ರದೇಶದಲ್ಲಿ ಗಟ್ಟಿ ನೆಲವನ್ನು ಹಿಡಿಯುವುದು ಅಸಾಧ್ಯವೆನ್ನಿಸತೊಡಗುತ್ತದೆ...'

ಈ ಪತನ, ಸವಾಲುಗಳ ನಡುವೆ ಕೂಡ ಲೋಹಿಯಾ ಆಶಾವಾದದಿಂದ ಹೇಳುತ್ತಾರೆ:

'ಈ ಕೆಸರಿನೊಳಕ್ಕೆ ತತ್ವ ಹಾಗೂ ನಿಯಮಗಳ ಗಟ್ಟಿಯಾದ ಕವೆಗಳನ್ನು ನೆಡಬೇಕು. ಸುತ್ತಲ ಸ್ಥಿತಿ ಹೋಲಿಸಿದಾಗ ಇವು ವಾಸ್ತವವಾಗಿ ಇರುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಕ್ರಾಂತಿಕಾರಿಯಾಗಿ ಕಾಣುವುದು ಸಹಜ.'

ಭಾರತದ ಎಲ್ಲೆಡೆ 'ಬೆಲೆ ನಿಯಂತ್ರಿಸಿ' ಚಳುವಳಿ, ವಿದ್ಯಾರ್ಥಿ ಚಳುವಳಿ, ಪೊಲೀಸ್ ಚಳುವಳಿಗಳು ಶುರುವಾಗಿದ್ದವು. ಚಳುವಳಿಗಳನ್ನು ಬೆಂಬಲಿಸುತ್ತಿದ್ದ ಲೋಹಿಯಾ ಬಂಧನವೂ ಆಗುತ್ತಿತ್ತು. ಉತ್ತರ ಪ್ರದೇಶ ಬಂದ್‌ನಲ್ಲಿ ಭಾಗವಹಿಸಲು ಹೋಗುತ್ತಿದ್ದ ಲೋಹಿಯಾರನ್ನು ಆಗ್ರಾದಲ್ಲಿ ಬಂಧಿಸಿ ಸೆರೆಮನೆಯಲ್ಲಿರಿಸಲಾಯಿತು. ಸೆರೆಮನೆಯಲ್ಲಿದ್ದ ತೋತಾ ಎಂಬ ಖೈದಿಯ ಮರಣದಂಡನೆಯನ್ನು ತಪ್ಪಿಸಲು ಲೋಹಿಯಾ ಪ್ರಯತ್ನಿಸಿದ್ದನ್ನು ಓಂಕಾರ್ ಶರದ್ ದಾಖಲಿಸುತ್ತಾರೆ. ತೋತಾ ತನ್ನ ಪ್ರಿಯತಮೆಯ ಗಂಡನನ್ನು ಕೊಂದಿದ್ದ. ಅವನ ಮರಣದಂಡನೆ ಒಮ್ಮೆ ನಿಗದಿಯಾಗಿ ಮುಂದಕ್ಕೆ ಹೋಗಿತ್ತು. ಜೈಲಿನಲ್ಲಿ ತಮ್ಮನ್ನು ಕಾಣಲು ಬಂದಿದ್ದ ಗೌಡೆ ನರಹರಿಯವರ ಮೂಲಕ ಲೋಹಿಯಾ ರಾಷ್ಟ್ರಪತಿಗಳಿಗೆ ಕ್ಷಮಾದಾನ ಕೋರುವ ಮನವಿ ಕಳಿಸಿದರು. ರಾಷ್ಟ್ರಪತಿ ಮನವಿಯನ್ನು ತಿರಸ್ಕರಿಸಿದರು.

ಲೋಹಿಯಾಗೆ ದುಃಖವಾಯಿತು. ತಪ್ಪುತಪ್ಪು ಔಷಧಿ–ಇಂಜೆಕ್ಷನ್ ಕೊಟ್ಟು ರೋಗಿಗಳನ್ನು ಸಾಯಿಸಿದ್ದ ಡಾಕ್ಟರೊಬ್ಬನ ಮರಣದಂಡನೆಗೆ ಕ್ಷಮಾದಾನ ಸಿಕ್ಕಿತ್ತು; ತೋತಾನ ಅಪರಾಧ 'ಗಣ್ಯ ವ್ಯಕ್ತಿ' ಎನ್ನಿಸಿಕೊಂಡಿದ್ದ ಡಾಕ್ಟರನ ಅಪರಾಧಕ್ಕಿಂತ ಕಡಿಮೆಯದಾಗಿತ್ತು ಎಂದು ಲೋಹಿಯಾ ವಾದಿಸಿದ್ದರು.

ಆಗ್ರಾದಲ್ಲಿ ಸರ್ಕಾರ ಪ್ಯಾರಾ ಮಿಲಿಟರಿ ಪಡೆಗಳನ್ನು ಚಳುವಳಿಗಾರರ ಮೇಲೆ ಛೂ ಬಿಟ್ಟಿತ್ತು. ಆಗ ಲೋಹಿಯಾ ಹೇಳಿದರು:

'ಯಾವ ದೇಶ ತನ್ನ ಆಂತರಿಕ ಚಳುವಳಿಗಳನ್ನು ಬಗ್ಗು ಬಡಿಯಲು ಸೇನೆಯನ್ನು ಬಳಸುತ್ತದೋ, ಅದು ವಿದೇಶಿ ಆಕ್ರಮಣವನ್ನು ಎದುರಿಸುವಲ್ಲಿ ಅಸಮರ್ಥವಾಗುತ್ತದೆ ಹಾಗೂ ದುರ್ಬಲವಾಗುತ್ತದೆ.'

ಇದು ಎಲ್ಲ ಕಾಲದ ಸರ್ಕಾರಗಳಿಗೂ ಸಲ್ಲುವ ಎಚ್ಚರಿಕೆಯಂತಿದೆ!

ಹಿಂದೊಮ್ಮೆ 'ಇಂಡಿಯನ್ ಡಿಫೆನ್ಸ್ ಆಕ್ಟ್' ಪ್ರಸ್ತಾವದ ಬಗ್ಗೆ ಲೋಹಿಯಾ ಸರ್ಕಾರವನ್ನು ಎಚ್ಚರಿಸಿದ್ದರು. ಮುಂದೆ ಸರ್ಕಾರ ಲೋಹಿಯಾರನ್ನೇ ಪಾಕಿಸ್ತಾನ–ಭಾರತ ಸಂಬಂಧಗಳ ಮರು ಸ್ಥಾಪನೆಯ ಚಿಂತನಾ ಸಮಾವೇಶದ ಸಂದರ್ಭದಲ್ಲಿ ಈ ಭದ್ರತಾಕಾಯ್ದೆಯಡಿ ಬಂಧಿಸಿತು. ತನ್ನ ದೇಶಭಕ್ತಿಯನ್ನೇ ಅನುಮಾನಿಸಿದ ಈ ಬಂಧನ ಲೋಹಿಯಾರನ್ನು ಸಿಟ್ಟಿಗೆಬ್ಬಿಸಿತು. ಸುಪ್ರೀಂ ಕೋರ್ಟ್‌ನಲ್ಲಿ ಲೋಹಿಯಾ ತಾವೇ ವಾದ ಮಾಡಿ ಬಿಡುಗಡೆಯಾದರು.

ಈ ನಡುವೆ ಲೋಹಿಯಾ ಸಂಯುಕ್ತ ಸಮಾಜವಾದಿ ಪಕ್ಷವನ್ನು ಮುನ್ನಡೆಸುವ ಸವಾಲು ಎದುರಾಯಿತು. 1966ರ ನಡುಭಾಗದಲ್ಲಿ ರಾಜಸ್ತಾನದ ಕೋಟಾದಲ್ಲಿ ಸಂಯುಕ್ತ ಸಮಾಜವಾದಿ ಪಕ್ಷಕ್ಕೆ ವಿಶಾಲ ಕ್ರಿಯಾಯೋಜನೆಯೊಂದನ್ನು ಹಾಕಿಕೊಟ್ಟರು.

ಇಸವಿ 1967. ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳು ಹತ್ತಿರವಾಗತೊಡಗಿದ್ದವು. ತಿದ್ದಿದ ಚುನಾವಣಾ ಪ್ರಣಾಳಿಕೆಯನ್ನೂ, ಸಂಯುಕ್ತ ಸಮಾಜವಾದಿ ಪಕ್ಷವನ್ನು ಎಚ್ಚರಿಸುವ 'ಸುಧಾರಿಸಿರಿ ಅಥವಾ ಒಡೆದು ಚೂರಾಗಿರಿ' ಲೇಖನವನ್ನೂ ರಮಾಗೆ ಕಳಿಸಿದ ಲೋಹಿಯಾ, ಅವನ್ನು ಅಚ್ಚು ಮಾಡಲು ಸೂಚಿಸುತ್ತಾರೆ. ಆದರೆ ಮಾರನೆಯ ದಿನದ ಪತ್ರದಲ್ಲಾಗಲೇ ಹೀಗೆ ಬರೆಯುತ್ತಾರೆ:

'ಈಚೆಗೆ ರಾಜಕೀಯ ನನಗೆ ಹಿಡಿಸುತ್ತಿಲ್ಲ. ಆದರೆ ಜಗತ್ತಿನಲ್ಲಿ ಯಾವುದು ತಾನೇ ಪೂರಾ ಒಳ್ಳೆಯದು?'

ಇಂಥ ತಾತ್ವಿಕ ಹೊಯ್ದಾಟಗಳ ನಡುವೆಯೂ, 1967ರ ಚುನಾವಣೆಯ ಹೊತ್ತಿಗೆ ಲೋಹಿಯಾ ದೇಶದ ಮಹತ್ವದ ಚಿಂತಕರಾಗಿ, ರಾಜಿಯಿಲ್ಲದ ಧೀಮಂತ ವಿರೋಧಿ ನಾಯಕರಾಗಿ ರೂಪುಗೊಂಡಿದ್ದರು. (ಸಶೇಷ)